# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-3504/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 14/06/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಸುರೇಶ್ ದೇವಾಡಿಗ, ಮಹಾಲಕ್ಷ್ಮೀನಗರ, ಕಾರ್ಕಳ ಅಂಚೆ, ಕಾರ್ಕಳ ತಾಲ್ಲೂಕು ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಸುರೇಶ್ ದೇವಾಡಿಗ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಕಾರ್ಕಳ ತಾಲ್ಲೂಕಿನ ನಂದಳಿಕೆ ಗ್ರಾಮದ ಸರ್ವೇ ನಂಬರ್ 123/ಪಿ1, 31/ಪಿ2, 339/ಪಿ1, ಕಲ್ಯಾ ಗ್ರಾಮದ ಸರ್ವೇ ನಂಬರ್ 233 ಹಾಗೂ ನಿಟ್ಟೆ ಗ್ರಾಮದ ಸರ್ವೇ ನಂಬರ್ 254 ಮತ್ತು ಕುಕ್ಕುಂದೂರು ಗ್ರಾಮದ ಸರ್ವೇ ನಂಬರ್ 281 ರಲ್ಲಿ ಹಾಗೂ ಕಾರ್ಕಳ ತಾಲ್ಲೂಕಿನ ಇತರೆ ಪ್ರದೇಶಗಳು "ಡೀಮ್ಡ್ ಫಾರೆಸ್ಟ್" ಪ್ರದೇಶಗಳಾಗಿದ್ದರೂ ಸಹ, ಸದರಿ ಅರಣ್ಯ ಪ್ರದೇಶಗಳಲ್ಲಿ ಅವ್ಯಾಹಿತವಾಗಿ ಗಣಿಗಾರಿಕೆ ನಡೆಯುತ್ತಿದೆ ಹಾಗೂ ಕಲ್ಲುಗಳ ಕ್ರಷರ್‌ಗಳು ಸಹ ಕೆಲಸ ನಿರ್ವಹಿಸಿ ಪರಿಸರ ಮಾಲಿನ್ಯಗೊಳ್ಳುತ್ತಿದೆ, ಇದರಿಂದ ಸದರಿ ಜಾಗದ ಸುತ್ತಲೂ ವಾಸಿಸುವ ಜನರಿಗೆ, ಅರಣ್ಯ ಜೀವಿಗಳಿಗೆ ತೊಂದರೆಯಾಗಿ ಆರೋಗ್ಯದ ಮೇಲೂ ದುಷ್ಪರಿಣಾಮ ಉಂಟಾಗುತ್ತಿರುತ್ತದೆ. ಈ ಬಗ್ಗೆ ಗಣಿಗಾರಿಕೆಯನ್ನು ನಿಲ್ಲಿಸುವಂತೆ ಕೋರಿ ಎದುರುದಾರರಿಗೆ ವಿನಂತಿಸಿದ್ದರೂ ಹಾಗೂ ಈ ಸಂಬಂಧ ಅರಣ್ಯ ಅಧಿಕಾರಿಗಳಿಗೂ ತಿಳಿಸಿದ್ದರೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಹಾಗೂ ಗಣಿಗಾರಿಕೆಯನ್ನು ನಿಲ್ಲಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. 1ನೇ ಎದುರುದಾರರರಾದ ಹಿರಿಯ ಭೂ ವಿಜ್ಞಾನಿ (ಖನಿಜ) ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ವಿಜಾಪುರ ಇವರು ತಮ್ಮ ಆಕ್ಷೇಪಣೆಯಲ್ಲಿ

ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ನಂದಳಿಕೆ ಗ್ರಾಮದ ಸರ್ವೆ ನಂಬರ್ 339 ರಲ್ಲಿ ಶ್ರೀ ಸುರೇಶ್ ಶೆಟ್ಟಿ ಇವರು 2.50 ಎಕರೆಗೆ ಕಟ್ಟಡ ಕಲ್ಲು ಗಣಿಗಾರಿಕೆಗಾಗಿ 5 ವರ್ಷಗಳ ಅವಧಿಗೆ ದಿನಾಂಕ 28/05/2007 ರಿಂದ ಅನ್ವಯವಾಗುವಂತೆ ಕಲ್ಲುಗಣಿ ಗುತ್ತಿಗೆ ಸಂಖ್ಯೆ:17ರಡಿಯಲ್ಲಿ 5 ವರ್ಷಗಳ ಅವಧಿಗೆ ದಿನಾಂಕ 28/05/2007 ರಿಂದ ಅನ್ವಯವಾಗುವಂತೆ ಕಲ್ಲುಗಣಿ ಗುತ್ತಿಗೆ ಪಡೆದಿರುತ್ತಾರೆ. ಉಪನಿರ್ದೇಶಕರು ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಮಂಗಳೂರು ಇವರು ಸದರಿ ಕಲ್ಲುಗಣಿ ಗುತ್ತಿಗೆಯನ್ನು ಮಂಜೂರು ಮಾಡಿರುತ್ತಾರೆ. ಇದಾದ ನಂತರ ದಿ:27/05/2012 ರಂದು ಕಲ್ಲು ಗಣಿ ಗುತ್ತಿಗೆ ಅವಧಿ ಮುಕ್ತಾಯಗೊಂಡಿದ್ದು, ಗುತ್ತಿಗೆದಾರರು 90 ದಿವಸಗಳ ಮುಂಚಿತವಾಗಿ ಕಲ್ಲು ಗಣಿ ಗುತ್ತಿಗೆ ನವೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸದೇ ಇದ್ದ ಕಾರಣ, ಕರ್ನಾಟಕ ಉಪಖನಿಜ ರಿಯಾಯತಿ ನಿಯಮಾವಳಿ 1994ರ ಉಪನಿಯಮ 21(2) ಮತ್ತು 31 ರಂತೆ ನವೀಕರಣ ಅರ್ಜಿಯನ್ನು ತಿರಸ್ಕರಿಸಲಾಗಿತ್ತು. ಸದರಿ ತಿರಸ್ಕೃತ ಅರ್ಜಿಯ ಮೇಲೆ ಪರಿಷ್ಕರಣೆಯನ್ನು ಜಂಟಿ ನಿರ್ದೇಶಕರು (ದವ) ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಮೈಸೂರು ಇವರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಕರ್ನಾಟಕ ಉಪಖನಿಜ ರಿಯಾಯತಿ ನಿಯಮಾವಳಿ 1994 ರಂತೆ ಜಂಟಿ ನಿರ್ದೇಶಕರು ಕಲ್ಲು ಗಣಿ ಗುತ್ತಿಗೆ ನವೀಕರಣಕ್ಕೆ ಕ್ರಮ ವಹಿಸಲು ಸಕ್ಷಮ ಅಧಿಕಾರಿಗಳಿಗೆ ಸೂಚಿಸಿ ಪರಿಷ್ಕರಣಾ ಅರ್ಜಿಯನ್ನು ವಿಲೇಗೊಳಿಸಿರುತ್ತಾರೆ. ಸದರಿ ಅರ್ಜಿಗೆ ತಹಶೀಲ್ದಾರರು, ಕಾರ್ಕಳ ಹಾಗೂ ಉಪಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ಇವರಿಗೆ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ನಿರಾಕ್ಷೇಪಣಾ ಕೋರಿ ಪತ್ರ ಬರೆಯಲಾಗಿದ್ದು, ಸದರಿಯವರು ನಿರಾಕ್ಷೇಪಣಾ ಪತ್ರವನ್ನು ನೀಡಿರುತ್ತಾರೆ. ಇದಲ್ಲದೇ, ಎರಡು ಎಕರೆ ಪ್ರದೇಶಕ್ಕೆ ಕಲ್ಲುಗಣಿ ಗುತ್ತಿಗೆ ನವೀಕರಿಸಬಹುದೆಂದು ತಾಂತ್ರಿಕ ಅಭಿಪ್ರಾಯವನ್ನು ತಾಂತ್ರಿಕ ಅಧಿಕಾರಿಗಳು ನೀಡಿರುತ್ತಾರೆ. ಅದರಂತೆ, ದಿ:13/06/2013ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಟಾಸ್ಕ್ ಪೋರ್ಸ್ ಸಮಿತಿಯ ಸಭೆಯಲ್ಲಿ ಅರ್ಜಿ ಸಲ್ಲಿಸಲಾಗಿದ್ದ ಪ್ರದೇಶಕ್ಕೆ ಕಲ್ಲು ಗಣಿ ಮಂಜೂರಾತಿಗಾಗಿ ಅನುಮೋದನೆಯನ್ನು ಪಡೆಯಲಾಗಿರುತ್ತದೆ. ಕರ್ನಾಟಕ ಉಪಖನಿಜ ರಿಯಾಯತಿ ನಿಯಮಾವಳಿ 94ರ ಉಪನಿಯಮ 27ರಂತೆ ಈ ಬಗ್ಗೆ ಅಧಿಸೂಚನೆ ಜಾರಿ ಮಾಡಲಾಗಿರುತ್ತದೆ. ಇದಲ್ಲದೇ, ಕರ್ನಾಟಕ ರಾಜ್ಯ ಪರಿಸರ ಅರ್ಹತಾ ಅಂದಾಜೀಕರಣ ಪ್ರಾಧಿಕಾರ (SEIAA) ಬೆಂಗಳೂರು ಇವರು ಸದರಿ ಪ್ರದೇಶಕ್ಕೆ ಪರಿಸರ ವಿಮೋಚನಾ ಪತ್ರವನ್ನು ಕಲ್ಲುಗಣಿ ಗುತ್ತಿಗೆಗಾಗಿ ನೀಡಿರುತ್ತಾರೆ. ಸದರಿ ಪ್ರದೇಶಕ್ಕೆ ಇಲಾಖೆಯ ಕಿರಿಯ ಅಭಿಯಂತರರು ಮತ್ತು ತಾಲ್ಲೂಕು ಮೋಜಣಿದಾರರು ದೂರುದಾರರ ಸಮ್ಮುಖದಲ್ಲಿ ಜಂಟಿ ಮೋಜಣಿ ಮಾಡಿ ವರದಿ ಸಲ್ಲಿಸಿರುತ್ತಾರೆ. ಕರ್ನಾಟಕ ಉಪಖನಿಜ ರಿಯಾಯತಿ ನಿಯಮಾವಳಿ 1994 ರಂತೆ ಟಾಸ್ಕಪೋರ್ಸ್ ಸಭೆಯಲ್ಲಿ ಕಲ್ಲುಗಣಿ ಗುತ್ತಿಗೆ ನವೀಕರಣ ಅರ್ಜಿಗೆ ಅನುಮತಿ ಪಡೆದು ದಿ:

28/05/2012ರವರೆಗೆ ಜಾರಿಗೆ ಬರುವಂತೆ 10 ವರ್ಷಗಳ ಅವಧಿಗೆ ಕಲ್ಲುಗಣಿಗಾರಿಕೆಯನ್ನು ನಡೆಸಲು ಗುತ್ತಿಗೆ ಸಂಖ್ಯೆ:345 ರಂತೆ ಮಂಜೂರಾತಿ ನೀಡಿರುತ್ತಾರೆ.

3. ಸೂಡ ಗ್ರಾಮದ ಸರ್ವೇ ನಂಬರ್ 31ಪಿ1, ಸರ್ವೇ ನಂಬರ್ 133/ಪಿ1 ಹಾಗೂ 233ರ ಜಾಗದಲ್ಲಿ ಶ್ರೀ ಸಿ.ಎಂ. ಜೋಯ್, ಶ್ರೀ ಗೌರೀಷ ರೈ, ಶ್ರೀ ದಿನೇಶ್ ಅಮೀನ್, ಶ್ರೀ ಕೃಷ್ಣ, ಶ್ರೀ ಗೋಪಾಲ ಬಂಗೇರ, ಶ್ರೀ ವಿನಾಯಕ ಕಾಮತ್ ಮತ್ತು ಮೆ. ಉಡುಪಿ ಮೆಟಲ್ ಇವರುಗಳಿಗೆ ಕಲ್ಲುಗಣಿ ಗುತ್ತಿಗೆಯನ್ನು ಉಪಖನಿಜ ರಿಯಾಯತಿ ನಿಯಮಾವಳಿ 1994 ರಂತೆ ಮಂಜೂರಾತಿ ನೀಡಲಾಗಿರುತ್ತದೆ. ಶ್ರೀ ದಿನೇಶ್ ಅಮೀನ್ ರವರು ಸೂಡ ಗ್ರಾಮದ ಸರ್ಕಾರಿ ಸರ್ವೇನಂಬರ್ 31ಪಿಯಲ್ಲಿ ಕಲ್ಲು ಗಣಿ ಗುತ್ತಿಗೆ ಸಂ:51 ರಂತೆ 1 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ದಿ:13/03/2008 ರಿಂದ ಐದು ವರ್ಷದ ಅವಧಿಗೆ ಗುತ್ತಿಗೆ ಮಂಜೂರಾತಿ ಪಡೆದಿರುತ್ತಾರೆ. ಇದೇ ಗ್ರಾಮದ ಇದೇ ಸರ್ವೇ ನಂಬರ್ ನಲ್ಲಿ ಕಲ್ಲುಗಣಿ ಗುತ್ತಿಗೆ ಸಂ:312 ರಲ್ಲಿ 0.05 ಎಕರೆ ಪ್ರದೇಶಕ್ಕೆ ಐದು ವರ್ಷಗಳ ಅವಧಿಗೆ ದಿ:13/03/2008 ರಿಂದ ಮಂಜೂರಾತಿ ಪಡೆದಿರುತ್ತಾರೆ. ಇದೇ ಗ್ರಾಮದ ಇದೇ ಸರ್ವೇ ನಂಬರ್ ಕಲ್ಲುಗಣಿ ಗುತ್ತಿಗೆ ಸಂ:312 ರಡಿಯಲ್ಲಿ 0.50 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ದಿ:21/05/2011 ರಿಂದ ಐದು ವರ್ಷಗಳ ಅವಧಿಗೆ ಗುತ್ತಿಗೆ ಮಂಜೂರಾತಿ ನೀಡಲಾಗಿರುತ್ತದೆ. ಇದಲ್ಲದೇ, ಇದೇ ಪ್ರದೇಶಕ್ಕೆ ಸೇರಿದ ಜಾಗದಲ್ಲಿ ಶ್ರೀ ಸಿ.ಎಂ. ಜೋಯ್ ಇವರಿಗೆ ಕಲ್ಲುಗಣಿ ಗುತ್ತಿಗೆ ಸಂಖ್ಯೆ: 3015 ರಡಿಯಲ್ಲಿ 2 ಎಕರೆ ಪ್ರದೇಶದಲ್ಲಿ ಕಲ್ಲುಗಣಿ ಗುತ್ತಿಗೆಯನ್ನು ಹಾಗೂ ಗುತ್ತಿಗೆ ಸಂಖ್ಯೆ:10 ರಡಿಯಲ್ಲಿ 2 ಎಕರೆ ವಿಸ್ತೀರ್ಣಕ್ಕೆ ಕಲ್ಲುಗಣಿ ಗುತ್ತಿಗೆಯನ್ನು ಹಾಗೂ ಸರ್ವೇ ನಂಬರ್ 257ರಲ್ಲಿ 2 ಎಕರೆ ಜಾಗದಲ್ಲಿ ಕಲ್ಲುಗಣಿ ಗುತ್ತಿಗೆಯನ್ನು ಹಾಗೂ ಕಲ್ಲುಗಣಿ ಗುತ್ತಿಗೆ ಸಂಖ್ಯೆ: 286ರಡಿಯಲ್ಲಿ 1 ಎಕರೆ ಪ್ರದೇಶಕ್ಕೆ ಕಲ್ಲುಗಣಿಗುತ್ತಿಗೆಯನ್ನು ಮಂಜೂರು ಮಾಡಲಾಗಿರುತ್ತದೆ. ಇದಲ್ಲದೇ, ಶ್ರೀ ಗೌರೀಷ್ ರೈ ಹಾಗೂ ಶ್ರೀ ಕೃಷ್ಣ, ಶ್ರೀ ಗೋಪಾಲ ಬಂಗೇರ ಹಾಗೂ ಮೆ. ಉಡುಪಿ ಮೆಟಲ್ ಇವರುಗಳಿಗೆ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ನೀಡಲಾಗಿರುತ್ತದೆ. ಕಲ್ಲುಗಣಿ ಗುತಿಗೆ ಮಂಜೂರಾತಿ ನೀಡಿದ ಸೂಡ ಗ್ರಾಮದ ಸರ್ವೇ ನಂಬರ್ 31ರ ಪಹಣಿ ದಾಖಲೆಯಲ್ಲಿ 117.10 ಎಕರೆ ಸರ್ಕಾರಿ ಜಮೀನೆಂದು 2010 ರ ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿರುವುದು ಕಂಡು ಬರುತ್ತದೆ ಎಂದು ಆದರೆ, ಪ್ರಸ್ತುತ ಸೂಡಾ ಗ್ರಾಮದ ಸರ್ವೇ ನಂಬರ್ 31ಪಿ2 ರಲ್ಲಿ 112.65 ಎಕರೆ ಡೀಮ್ಡ್ ಫಾರೆಸ್ಟ್ ಪಟ್ಟಿಯಲ್ಲಿ ಸೇರಿದ್ದು, ಇದರಲ್ಲಿ ಉಳಿಕೆ ಸರ್ಕಾರಿ ಜಮೀನು 4.52 ಎಕರೆ ಇದ್ದು, ಕಂದಾಯ ಇಲಾಖೆಯವರು ಜಂಟಿ ಮೋಜಣಿ ಮೂಲಕ ಡೀಮ್ಡ್ ಫಾರೆಸ್ಟ್ ಗಡಿಯನ್ನು ಗುರುತಿಸಿ ಪ್ರತ್ಯೇಕಿಸುವ ಕಾರ್ಯ ಇನ್ನು ಆಗಬೇಕಾಗಿದೆ ಎಂದು ಅರಣ್ಯಾಧಿಕಾರಿ, ಕಾರ್ಕಳ ಇವರು ತಿಳಿಸಿರುವುದರಿಂದ ಸೂಡಾ ಗ್ರಾಮದ ಸರ್ವೇ ನಂಬರ್ 31ಪಿ2ರ, 113ರಲ್ಲಿ ಶ್ರೀ ದಿನೇಶ್ ಅಮೀನ್,

ಶ್ರೀ ಗೋಪಾಲ ಬಂಗೇರ, ಶ್ರೀ ಗೌರೀಷ ರೈ ಹಾಗೂ ಮತ್ತಿತರರು ನಡೆಸುತ್ತಿರುವ ಕಲ್ಲುಗಣಿ ಗುತ್ತಿಗೆಯನ್ನು ರದ್ದುಪಡಿಸುವಂತೆ ಉಪಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ಇವರು ತಿಳಿಸಿದ ಮೇರೆಗೆ ಸದರಿಯವರುಗಳ ಕಲ್ಲುಗುತ್ತಿಗೆ ನವೀಕರಣ ಅರ್ಜಿಯನ್ನು ರದ್ದುಪಡಿಸಲಾಗಿರುತ್ತದೆ. ಈಗ ಸದರಿ ಜಮೀನುಗಳಲ್ಲಿ ಯಾವುದೇ ಅಕ್ರಮ ಕಲ್ಲುಗಣಿಗಾರಿಕೆ ನಡೆಯುತ್ತಿರುವುದಿಲ್ಲ. ಮುಂದೆ ಸಂಬಂಧಪಟ್ಟ ಕಲ್ಲುಗುತ್ತಿಗೆಗಳಿಗೆ ತಹಶೀಲ್ದಾರ್‌ರವರಿಂದ ನಕಾಶೆ ಹಾಗೂ ನಿರಾಕ್ಷೇಪಣಾ ಪತ್ರ ಪಡೆದು ಕಲ್ಲು ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗುತ್ತಿದೆ.

4. ಕಲ್ಯಾ ಗ್ರಾಮದ ಸರ್ವೇನಂಬರ್ 233 ರಲ್ಲಿ ಶ್ರೀ ಸಾಯಿ ಇಂಡಸ್ಟ್ರೀಸ್ ಇವರಿಗೆ 1ಎಕರೆ ವಿಸ್ತೀರ್ಣದಲ್ಲಿ, ಶ್ರೀ ಗೌರೀಶ್ ರೈ ಇವರಿಗೆ 0.50 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಶ್ರೀ ಪಳನಿ ಮೇಸ್ತ್ರಿ ಇವರಿಗೆ 0.50 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಹಾಗೂ ಮೆ. ಉಡುಪಿ ಮೆಟಲ್ ಇವರಿಗೆ 0.50 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಶ್ರೀ ಚಂದ್ರಶೇಖರ್ ರಾಮ್ ಇವರಿಗೆ 0.40 ಎಕರೆ ವಿಸ್ತೀರ್ಣದ ಜಾಗದಲ್ಲಿ ಶ್ರೀ ಸಂತೋಷ್ ಇವರಿಗೆ 0.50 ವಿಸ್ತೀರ್ಣದ ಜಾಗದಲ್ಲಿ, ಶ್ರೀ ಸ್ಟೀಫನ್ ಇವರಿಗೆ 1 ಎಕರೆ ವಿಸ್ತೀರ್ಣದ ಜಾಗದಲ್ಲಿ, ಶ್ರೀ ಹರ್ಷ ಎಸ್ ಸಾಲಿಯಾನ ಇವರಿಗೆ 1 ಎಕರೆ ವಿಸ್ತೀರ್ಣದ ಜಾಗದಲ್ಲಿ, ಶ್ರೀ ಚಂದ್ರಕರ ಕಾಮತ್ ಇವರಿಗೆ 0.50 ಎಕರೆ ವಿಸ್ತೀರ್ಣದ ಜಾಗದಲ್ಲಿ, ಶ್ರೀ ಮಂಜೂನಾಥ್ ಇವರಿಗೆ 0.25 ಎಕರೆ ವಿಸ್ತೀರ್ಣದ ಜಾಗದಲ್ಲಿ, ಶ್ರೀ ವಿನಾಯಕ್ ಕಾಮತ್ ಇವರಿಗೆ 0.50 ಎಕರೆ ವಿಸ್ತೀರ್ಣದ ಜಾಗದಲ್ಲಿ, ಶ್ರೀ ಗೌರೀಶ್ ರೈ ಇವರಿಗೆ 1.50 ಎಕರೆ ವಿಸ್ತೀರ್ಣದ ಜಾಗದಲ್ಲಿ ಕಲ್ಲುಗಣಿ ಗುತ್ತಿಗೆಯನ್ನು ತಹಶೀಲ್ದಾರ್ ರವರಿಂದ ನಕಾಶೆ ಹಾಗೂ ನಿರಾಕ್ಷೇಪಣಾ ಪತ್ರ ಪಡೆದು ಕಲ್ಲುಗಣಿ ಗುತ್ತಿಗೆಗಳನ್ನು ನಿಯಮಾವಳಿಗಳಂತೆ ಮಂಜೂರಾತಿ ನೀಡಲಾಗಿದ್ದು, ಇವರುಗಳು ಕಲ್ಲುಗಣಿ ಗುತ್ತಿಗೆ ಅವಧಿ ಮುಗಿದ ನಂತರ ಗುತ್ತಿಗೆಯ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದು, ನಿಯಮಾವಳಿಗಳಂತೆ ಇವರ ಅರ್ಜಿಗಳನ್ನು ತಿರಸ್ಕರಿಸಲಾಗಿರುತ್ತದೆ. ಈಗ ಸದರಿ ಪ್ರದೇಶದಲ್ಲಿ ಅಕ್ರಮ ಕಲ್ಲುಗಣಿಗಾರಿಕೆ ನಡೆದಿರುವುದಿಲ್ಲ.

5. ಕುಕ್ಕಂದೂರು ಗ್ರಾಮದಲ್ಲಿ ಕಲ್ಲುಗಣಿ ಗುತ್ತಿಗೆಗಳ ಅವಧಿ ಮುಗಿದ ನಂತರ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದು, ಸದರಿ ಪ್ರದೇಶದಲ್ಲಿ ಹೆಚ್ಚಿನ ಪ್ರದೇಶವು ಡೀಮ್ಡ್ ಫಾರೆಸ್ಟ್ ನಲ್ಲಿ ಬರುತ್ತಿದ್ದುದರಿಂದ ಅರಣ್ಯ ಇಲಾಖೆಯವರು ನಿರಾಕ್ಷೇಪಣಾ ಪತ್ರ ನೀಡಿರುವುದಿಲ್ಲ. ಆದ್ದರಿಂದ, ಸದರಿಯವರುಗಳ ನವೀಕರಣ ಅರ್ಜಿಯನ್ನು ಹಾಗೂ ಹೊಸ ಕಲ್ಲುಗಣಿ ಗುತ್ತಿಗೆ ಅರ್ಜಿಗಳನ್ನು ತಿರಸ್ಕರಿಸಲಾಗಿರುತ್ತದೆ. ಸದರಿ ಪ್ರದೇಶದಲ್ಲಿ ಯಾವುದೇ ಅನಧೀಕೃತ ಕಲ್ಲುಗಣಿಗಾರಿಕೆ ನಡೆಯುತ್ತಿರುವುದು ಕಂಡು ಬಂದಿರುವುದಿಲ್ಲ. ಅಕ್ರಮ ಸ್ಫೋಟಕ ಬಳಸಿ ಸೂಡಾ ಗ್ರಾಮದಲ್ಲಿ ಕಲ್ಲುಗಣಿಗಾರಿಕೆ ನಡೆಸುತ್ತಿರುವ ಸಂಬಂಧ ಶ್ರೀ ಗೋಪಾಲ ಬಂಗೇರ ರವರ

ವಿರುದ್ಧ ಕಾರ್ಕಳ ತಾಲ್ಲೂಕಿನ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ಅನ್ನು ದಾಖಲಿಸಿ ಮೊಕದಮ್ಮೆಯನ್ನು ನೋಂದಾಯಿಸಿಕೊಳ್ಳಲಾಗಿರುತ್ತದೆ ಎಂದು 1ನೇ ಎದುರುದಾರರು ತಿಳಿಸಿರುತ್ತಾರೆ.

6. ಮುಂದುವರೆದು, ದಿ:14/09/2009 ರಿಂದ ಉಡುಪಿ ಜಿಲ್ಲೆಯಲ್ಲಿ ಗಣಿ ಮತ್ತು ಭೂವಿಜ್ಞಾನ ಕಛೇರಿಯು ಪ್ರಾರಂಭವಾಗಿದ್ದು, ತಾನು 2013 ಮಾರ್ಚ್ ನಿಂದ 2015 ಆಗಸ್ಟ್ ತಿಂಗಳವರೆಗೆ ಹಿರಿಯ ಭೂವಿಜ್ಞಾನಿಯಾಗಿ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿರುತ್ತೇನೆಂದು ಹಾಗೂ ಈ ಅವಧಿಯಲ್ಲಿ 110 ಕಲ್ಲುಗಣಿ ಗುತ್ತಿಗೆಗಳನ್ನು ನಿಯಮ ಉಲ್ಲಂಘನೆಗೆ ಹಾಗೂ ಇಲಾಖೆಯ ಆಕ್ಷೇಪಣಾ ಪತ್ರದ ಸೂಚನೆಯಂತೆ ನಿಯಮಾವಳಿಗಳನ್ವಯ ರದ್ದುಪಡಿಸಲಾಗಿರುತ್ತದೆ. ಮಾನ್ಯ ಘನ ನ್ಯಾಯಾಲಯದ ನಿರ್ದೇಶನದಂತೆ, ಸರ್ಕಾರದ ಆದೇಶ ಸಂಖ್ಯೆ: ಸಿಐ299ಎಂಎಂಎನ್2011 ದಿ:30/06/2011ರ ಆದೇಶದಂತೆ ಹಾಗೂ ಕೇಂದ್ರ ಕಛೇರಿ ದಿ:13/07/2011 ರ ಸುತ್ತೋಲೆಯಂತೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿದ ಜಿಲ್ಲಾ ಟಾಸ್ಕ್ ಪೋರ್ಸ್ ಸಮಿತಿ ಸಭೆಯಲ್ಲಿ ಏಕಗವಾಕ್ಷಿ ಪದ್ಧತಿಯಲ್ಲಿ ಕಲ್ಲುಗಣಿ ಗುತ್ತಿಗೆಗಳ ಅರ್ಜಿಯನ್ನು ಮಂಡಿಸಿ ಸದಸ್ಯ ಇಲಾಖೆಗಳ ಅಭಿಪ್ರಾಯವನ್ನು ಸಮಿತಿ ಸಭೆಯಲ್ಲಿ ಪಡೆದು ಸಭೆಯ ಅಂತಿಮ ತೀರ್ಮಾನದಂತೆ ನಿಯಮಾವಳಿಗಳಂತೆ ಕಲ್ಲುಗಣಿ ಗುತ್ತಿಗೆಯನ್ನು ಮಂಜೂರು ಮಾಡಲಾಗುತ್ತಿರುತ್ತದೆ. ಆದ್ದರಿಂದ, ತನ್ನ ಅವಧಿಯಲ್ಲಿ ಯಾವುದೇ ಅಕ್ರಮ ಗಣಿಗಾರಿಕೆ ನಡೆಯಲು ಅವಕಾಶ ನೀಡಿರುವುದಿಲ್ಲವೆಂದು ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ಕಂಡು ಬಂದ ಪ್ರಕರಣಗಳಲ್ಲಿ ಮೊಕದ್ದಮೆಗಳನ್ನು ದಾಖಲಿಸಿರುತ್ತೇನೆಂದು, ಅಂತಹ ಮೊಕದ್ದಮೆಗಳು ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ ಎಂದು ಅಕ್ರಮ ಖನಿಜ ಸಾಗಾಟಕ್ಕೆ ನಿಯಮಾವಳಿಗಳಂತೆ ದಂಡ ವಿಧಿಸಿ ರೂ.130.58 ಲಕ್ಷ ಮೊತ್ತದ ಹಣವನ್ನು ಸರ್ಕಾರದ ಖಜಾನೆಗೆ ವಹಿಸಲಾಗಿದೆ ಎಂದು ತಿಳಿಸಿರುತ್ತಾರೆ. ಈಗ ಅಕ್ರಮ ಗಣಿಗಾರಿಕೆ ಹಾಗೂ ಖನಿಜ ಸಾಗಾಟ ತಡೆಗಟ್ಟಲು ಅಂತಹ ಅಕ್ರಮ ಗಣಿಗಾರಿಕೆ ಹಾಗೂ ಖನಿಜ ಸಾಗಾಟದ ಬಗ್ಗೆ ಕ್ರಮ ಕೈಗೊಳ್ಳಲು ಪೊಲೀಸ್ ವೃತ್ತ ನಿರೀಕ್ಷಕರು, ಪೊಲೀಸ್ ಉಪನಿರೀಕ್ಷಕರು, ಕಂದಾಯ ನಿರೀಕ್ಷಕರು ಹಾಗೂ ವಲಯ ಅರಣ್ಯಾಧಿಕಾರಿಗಳಿಗೆ ಅಧಿಕಾರವನ್ನು ನೀಡಲಾಗಿರುತ್ತದೆ. ಇದರಿಂದ ಕಾರ್ಕಳ ತಾಲ್ಲೂಕಿನಲ್ಲಿ ಯಾವುದೇ ಅಕ್ರಮ ಗಣಿಗಾರಿಕೆ ನಡೆಯುವುದಕ್ಕೆ ಆಸ್ಪದ ನೀಡಿರುವುದಿಲ್ಲ. ಆದ್ದರಿಂದ, ದೂರುದಾರರು ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾದ ಸಂಗತಿ ಎಂದು ತಿಳಿಸಿರುತ್ತಾರೆ.

7. 2ನೇ ಎದುರುದಾರರಾದ ಕಾರ್ಕಳ ತಾಲ್ಲೂಕಿನ ತಹಶೀಲ್ದಾರ್‌ರವರು ತಮ್ಮ ಆಕ್ಷೇಪಣೆಯಲ್ಲಿ ಕಾರ್ಕಳ ತಾಲ್ಲೂಕಿನ ನಂದಳಿಕೆ, ಸೂಡ, ಕಲ್ಯಾ, ಕುಕ್ಕುಂದೂರು ಗ್ರಾಮಗಳಲ್ಲಿ ಕಲ್ಲುಗಣಿಗಾರಿಕೆಯನ್ನು ಸಾಂಪ್ರದಾಯಿಕವಾಗಿ ನಡೆಸಲಾಗುತ್ತಿತ್ತೆಂದು, ಈ ಪ್ರದೇಶದಲ್ಲಿ ಡೀಮ್ಡ್ ಅರಣ್ಯವೆಂದು ಪರಿಗಣಿಸಲಾದ

ಜಮೀನಿನ ಪರಿಶೀಲನೆಯನ್ನು ಕಂದಾಯ ಮತ್ತು ಅರಣ್ಯ ಸಿಬ್ಬಂದಿಯವರು ಕೈಗೊಂಡಿರುತ್ತಾರೆಂದು, ಎಲ್ಲ ಸರ್ಕಾರಿ ಜಮೀನುಗಳನ್ನು ಡೀಮ್ಡ್ ಅರಣ್ಯ ಪಟ್ಟಿಗೆ ಸೇರಿಸಲಾಗಿತ್ತು, ಇಂತಹ ಸರ್ಕಾರಿ ಜಮೀನಿಲ್ಲಿ ಜನ ವಸತಿ ಪ್ರದೇಶ, ಗ್ರಾಮೀಣ ಪ್ರದೇಶದ ಶಾಲೆ, ಅಂಗನವಾಡಿ, ಬಡ ರೈತರ ಒತ್ತುವರಿ ಪ್ರದೇಶಗಳು ಸೇರಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾದ ಪಟ್ಟಿಯಲ್ಲಿ ಎಲ್ಲ ಸರ್ಕಾರಿ ಸರ್ವೇನಂಬರ್‌ಗಳು ಸೇರಿಕೊಂಡಿದ್ದರಿಂದ ನಿವೇಶನ ವಿತರಣೆಯಂತಹ ಸಾರ್ವಜನಿಕರ ಜನಪಯೋಗಿ ಯೋಜನೆಗಳಿಗೆ ಅವಕಾಶವಿರುವುದಿಲ್ಲ. ಸಾರ್ವಜನಿಕ ಹಿತಾಸಕ್ತಿಯಿಂದ ಕಾಮಗಾರಿಯಾದ ಕೊಂಕಣ್ ರೈಲ್ವೆ, ಮಂಗಳೂರು–ಬಾಂಬೆ ರಾಷ್ಟ್ರೀಯ ಹೆದ್ದಾರಿಯ ಚತುಷ್ಪಥ ಕಾಮಗಾರಿ, ನಂದಿಕೂರು ಉಷ್ಣ ವಿದ್ಯುತ್ ಸ್ಥಾವರ ಇತ್ಯಾದಿ ರಾಷ್ಟ್ರೀಯ ಕಾಮಗಾರಿಗಳಿಗೆ ಜಲ್ಲಿ ಮತ್ತು ಕಲ್ಲುಗಳನ್ನು ಪೂರೈಕೆ ಮಾಡುವ ಕ್ರಷರ್‌ಗಳು ಡೀಮ್ಡ್ ಅರಣ್ಯ ಪ್ರದೇಶದಲ್ಲಿ ಅಲ್ಲಲ್ಲಿ ಇದ್ದು, ಇವುಗಳು ಡೀಮ್ಡ್ ಅರಣ್ಯವೆಂದು ಪರಿಗಣಿಸುವ ಮೊದಲೇ ಇದ್ದಂತಹ ಉದ್ದಿಮೆಗಳಾಗಿರುತ್ತವೆ. ಡೀಮ್ಡ್ ಅರಣ್ಯ ಪಟ್ಟಿಯಲ್ಲಿ ಸೇರಿರುವ ಜಮೀನಿನಲ್ಲಿ ನಿಜವಾಗಿ ಅರಣ್ಯ ಸ್ವರೂಪ ಜಮೀನನ್ನು ಮತ್ತು ಅರಣ್ಯ ಸ್ವರೂಪ ಇಲ್ಲದ ಪ್ರದೇಶವನ್ನು ಪ್ರತ್ಯೇಕಿಸುವ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ. ಇಂತಹ ಪಟ್ಟಿಯನ್ನು ಸರ್ಕಾರದ ಮೂಲಕ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲು ಜಿಲ್ಲಾಡಳಿತವು ಪ್ರಸ್ತಾವನೆಯನ್ನು ಸಲ್ಲಿಸಿರುತ್ತದೆ ಎಂದು ತಿಳಿಸಿರುತ್ತಾರೆ.

8. ನಂದಳಿಕೆ, ಕಲ್ಯಾ, ನಿಟ್ಟೆ, ಕುಕ್ಕಂದೂರು ಗ್ರಾಮಗಳಲ್ಲಿ ಅರಣ್ಯ ಸ್ವರೂಪ ಇಲ್ಲದ ಕಲ್ಲು ಬಂಡೆಗಳಿರುವ ಪ್ರದೇಶವನ್ನು ಗುರುತಿಸಿ ಜಿಲ್ಲಾ ಟಾಸ್ಕ್ ಪೋರ್ಸ ಸಮಿತಿಯಿಂದ ಅನುಮೋದನೆ ಪಡೆದು ಪರವಾನಗೆಯನ್ನು ನವೀಕರಿಸಲಾಗಿದೆ. ಯಾವುದೇ ಹೊಸ ಪ್ರದೇಶದಲ್ಲಿ ಗಣಿಗಾರಿಕೆಗೆ ಶಿಫಾರಸ್ಸು ಮಾಡಿರುವುದಿಲ್ಲ. ಪರವಾನಗೆ ಇಲ್ಲದೇ ಗಣಿಗಾರಿಕೆ ನಡೆಸುತ್ತಿದ್ದ ಕುಕ್ಕಂದೂರು ಗ್ರಾಮದ ಸರ್ವೇ ನಂಬರ್ 281 ರಲ್ಲಿ 7 ಜನರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಭೂ ವಿಜ್ಞಾನ, ಕಂದಾಯ ಹಾಗೂ ಅರಣ್ಯ ಇಲಾಖೆಗಳ ಸಂಯುಕ್ತ ಕಾರ್ಯಾಚರಣೆಯಲ್ಲಿ ಕ್ರಮ ಕೈಗೊಂಡು ಆಪಾದಿತರ ಮೇಲೆ ಮೊಕದ್ದಮೆಯನ್ನು ದಾಖಲಿಸಲಾಗಿರುತ್ತದೆ. ಆದ್ದರಿಂದ, ದೂರುದಾರರು ಮಾಡಿರುವ ತನ್ನ ಮೇಲಿನ ಆರೋಪಗಳು ಸತ್ಯಕ್ಕೆ ದೂರವಾಗಿದೆ ಎಂದು ತಿಳಿಸಿರುತ್ತಾರೆ.

9. 3ನೇ ಎದುರುದಾರರು ಸಹ 1 ಮತ್ತು 2ನೇ ಎದುರುದಾರರನ್ನು ಅನುಸರಿಸಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

10. ಸದರಿ ಎದುರುದಾರರ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಅದರಲ್ಲಿ ಕಾರ್ಕಳ ತಾಲ್ಲೂಕಿನ ನಂದಳಿಕೆ ಸೂಡ, ಕಲ್ಯ ಹಾಗೂ ಕುಕ್ಕುಂದೂರು ಗ್ರಾಮಗಳಲ್ಲಿ ಕಲ್ಲುಗಣಿಗಾರಿಕೆಯನ್ನು ಸಾಂಪ್ರಾದಾಯಿಕವಾಗಿ ನಡೆಸಲಾಗುತ್ತಿತ್ತು

ಎಂದು ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುವ ವಿಷಯ ಸರಿಯಲ್ಲವೆಂದು, ಈ ಪ್ರದೇಶದಲ್ಲಿ ಡೀಮ್ಡ್ ಅರಣ್ಯವೆಂದು ಪರಿಗಣಿಸಲಾದ ಜಮೀನುಗಳಿರುತ್ತವೆ. ಎಲ್ಲ ಸರ್ಕಾರಿ ಜಮೀನುಗಳನ್ನು ಡೀಮ್ಡ್ ಅರಣ್ಯ ಪಟ್ಟಿಗೆ ಸೇರಿಸಲಾಗಿದೆ. ಈ ಬಗ್ಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಇದುವರೆಗೂ ತಮ್ಮ ಅಂತಿಮ ಆದೇಶವನ್ನು ನೀಡಿರುವುದಿಲ್ಲ. ಇದಲ್ಲದೇ, ಡೀಮ್ಡ್ ಅರಣ್ಯ ಸ್ವರೂಪದ ಪ್ರದೇಶವನ್ನು ಪ್ರತ್ಯೇಕಿಸುವ ಸಮೀಕ್ಷೆಯ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದ್ದು, ಈ ಬಗ್ಗೆ ಯಾವುದೇ ಆದೇಶ ಬಂದಿರುವುದಿಲ್ಲ. ಸರ್ವೇ ನಂಬರ್ 281 ರಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು, ಈ ಬಗ್ಗೆ 7 ಜನರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ. ಆದರೆ, ಅವರುಗಳ ಯಾವುದೇ ಕಠಿಣ ಕ್ರಮ ಜರುಗಿಸಿರುವುದಿಲ್ಲ ಮತ್ತು ಈಗಲೂ ಸಹ ಅಕ್ರಮ ಗಣಿಗಾರಿಕೆ ಸದರಿ ಪ್ರದೇಶದಲ್ಲಿ ನಡೆಯುತ್ತಿರುತ್ತದೆ ಎಂದು ತಿಳಿಸಿರುತ್ತಾರೆ.

11. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಗಳನ್ನು ಹಾಗೂ ದೂರುದಾರರ ಪ್ರತ್ಯುತ್ತರವನ್ನು ಮತ್ತು ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಕಾರ್ಕಳ ತಾಲ್ಲೂಕಿನ ನಂದಳಿಕೆ, ಸೂಡ, ಕಲ್ಯಾ, ಕುಕ್ಕಂದೂರು ಗ್ರಾಮಗಳಲ್ಲಿ ಡೀಮ್ಡ್ ಅರಣ್ಯವೆಂದು ಪರಿಗಣಿಸಲಾದ ಜಮೀನುಗಳ ಪರಿಶೀಲನೆಯನ್ನು ಕಂದಾಯ ಮತ್ತು ಅರಣ್ಯ ಸಿಬ್ಬಂದಿಯವರು ಕೈಗೊಂಡಿರುತ್ತಾರೆಂದು, ಎಲ್ಲ ಸರ್ಕಾರಿ ಜಮೀನುಗಳನ್ನು ಡೀಮ್ಡ್ ಅರಣ್ಯಗಳ ಪಟ್ಟಿಗೆ ಸೇರಿಸಲಾಗಿತ್ತೆಂದು ಹಾಗೂ ಇಂತಹ ಪ್ರದೇಶಗಳಲ್ಲಿ ಜನ ವಸತಿ ಪ್ರದೇಶ, ಗ್ರಾಮೀಣ ಪ್ರದೇಶದ ಶಾಲೆ, ಅಂಗನವಾಡಿ ಹಾಗೂ ಬಡ ರೈತರ ಒತ್ತುವರಿ ಪ್ರದೇಶಗಳನ್ನು ಪ್ರತ್ಯೇಕಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರದ ಮೂಲಕ ಮಾನ್ಯ ಸರ್ವೋಚ್ಛ ನ್ಯಾಯಾಲಯಕ್ಕೆ ಸಲ್ಲಿಸಲು ಜಿಲ್ಲಾಡಳಿತವು ಮಾನ್ಯ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತದೆ ಎಂದು 2ನೇ ಎದುರುದಾರರು ತಿಳಿಸಿರುತ್ತಾರೆ. ಇದರಿಂದ, ಸದರಿ ಡೀಮ್ಡ್ ಫಾರೆಸ್ಟ್ ಪ್ರದೇಶದಲ್ಲಿ ಇದುವರೆಗೂ ಸದರಿ ಜನ ವಸತಿ ಪ್ರದೇಶವನ್ನು ಪ್ರತ್ಯೇಕಿಸುವ ಬಗ್ಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯದಿಂದ ಆದೇಶ ಬರದೇ ಇರುವ ಹಿನ್ನೆಲೆಯಲ್ಲಿ, ಈಗಾಗಲೇ ಡೀಮ್ಡ್ ಫಾರೆಸ್ಟ್ ಎಂದು ತೀರ್ಮಾನಿಸಿರುವ ಜಾಗಗಳು ಡೀಮ್ಡ್ ಫಾರೆಸ್ಟ್‌ಗಳಾಗಿಯೇ ಉಳಿದಿರುತ್ತವೆ. ಆದ್ದರಿಂದ, ಅಂತಹ ಪ್ರದೇಶಗಳಲ್ಲಿ ಕಲ್ಲುಗಣಿಗಾರಿಕೆ ಗುತ್ತಿಗೆಯನ್ನು ನೀಡಿರುವುದು/ನೀಡುವುದು ನ್ಯಾಯಸಮ್ಮತವಲ್ಲ ಹಾಗೂ ಸೂಕ್ತವಲ್ಲ. ಆದ್ದರಿಂದ, ಅಂತಹ ಪ್ರದೇಶಗಳಲ್ಲಿ ಇರುವ ಕಲ್ಲುಗಣಿಗಾರಿಕೆ ಗುತ್ತಿಗೆಯನ್ನು ಹಾಗೂ ಕಲ್ಲು ಪುಡಿ ಮಾಡುವ ಯಂತ್ರಗಳ ಘಟಕಗಳನ್ನು ನಡೆಸುವುದು ಪರಿಸರಕ್ಕೆ ಹಾನಿ ಉಂಟಾಗುವುದು ವೇದ್ಯವಾಗಿರುತ್ತದೆ.

**12.** ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, 2ನೇ ಎದುರುದಾರರಾದ ತಹಶೀಲ್ದಾರ್, ಕಾರ್ಕಳ ರವರು ತಿಳಿಸಿರುವಂತೆ ಕಾರ್ಕಳ ತಾಲ್ಲೂಕಿನ ನಂದಳಿಕೆ, ಸೂಡ, ಕಲ್ಯಾ ಹಾಗೂ ಕುಕ್ಕುಂದೂರು ಗ್ರಾಮಗಳಲ್ಲಿ ಬಹುತೇಕ ಪ್ರದೇಶಗಳು ಡೀಮ್ಡ್ ಅರಣ್ಯವೆಂದು ಪರಿಗಣಿಸಲಾಗಿದೆ ಎಂದು ಸದರಿ ಪ್ರದೇಶಗಳಲ್ಲಿ ಅರಣ್ಯ ಸ್ವರೂಪದ ಪ್ರದೇಶವನ್ನು ಮತ್ತು ಅರಣ್ಯ ಸ್ವರೂಪವಲ್ಲದ ಪ್ರದೇಶವನ್ನು ಪ್ರತ್ಯೇಕಿಸುವ ಸಮೀಕ್ಷೆ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದು, ಅದರಂತೆ ಅರಣ್ಯ ಸ್ವರೂಪದ ಪ್ರದೇಶವನ್ನು ಹಾಗೂ ಅರಣ್ಯ ಸ್ವರೂಪವಲ್ಲದ ಪ್ರದೇಶವನ್ನು ಪ್ರತ್ಯೇಕಿಸುವ ಸಮೀಕ್ಷೆ ಕೈಗೊಂಡು, ಸರ್ಕಾರದ ಮೂಲಕ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ ನಂತರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಬರುವವರೆಗೂ ಸದರಿ ಪ್ರದೇಶಗಳಲ್ಲಿ ಕಲ್ಲು ಗಣಿ ಗುತ್ತಿಗೆಯನ್ನು ನೀಡುವುದಾಗಲೀ ಹಾಗೂ ಕಲ್ಲುಪುಡಿ ಘಟಕಗಳನ್ನು ನಡೆಸುವುದಕ್ಕಾಗಲೀ ಅನುಮತಿ ನೀಡದಂತೆ ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

14/6/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು. 14/6/17